## ನಿಮ್ಮೊಡನೆ

# ಗ್ರಾಮ ಪಂಚಾಯಿತಿ ಸವಾಲುಗಳು

ಗ್ರಾಮ ಪಂಚಾಯಿತಿ ಚುನಾವಣೆಗಳ ಫಲಿತಾಂಶ ಹೊರಬೀಳುವುದರೊಂದಿಗೆ ಕಳೆದ ಎರಡು ಮೂರು ವಾರಗಳಿಂದ ರಾಜ್ಯದ ಗ್ರಾಮೀಣ ಪ್ರದೇಶಗಳನ್ನು ಆವರಿಸಿಕೊಂಡ ಚುನಾವಣಾ ಜ್ವರ ಶಮನಗೊಂಡಿದೆ. ಈ ಚುನಾವಣೆಗಳಲ್ಲಿ ನೇರವಾಗಿ ರಾಜಕೀಯ ಪಕ್ಷಗಳ ಪಾತ್ರ ಇಲ್ಲದಿದ್ದರೂ, ಅಪರೋಕ್ಷವಾಗಿ ಈ ಚುನಾವಣೆಗಳು ಕೂಡ ರಾಜಕೀಯ ಪಕ್ಷಗಳ ಕಸರತ್ತಿನ ಅಖಾಡಗಳಾಗಿವೆ. ಹಾಗಾಗಿಯೇ ವಿಧಾನಸಭೆ ಹಾಗೂ ಸಂಸತ್ ಚುನಾವಣೆಗಳಲ್ಲಿ ನಡೆಯುವ ಎಲ್ಲ ತೆರೆಮರೆಯ ವ್ಯವಹಾರಗಳು ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭದಲ್ಲೂ ಕಾಣಿಸುತ್ತವೆ. ಪ್ರಜಾಪ್ರಭುತ್ವದ ಆತ್ಯಂತಿಕ ಮಾದರಿಗಳಾದ ಪಂಚಾಯಿತಿ ಚುನಾವಣೆಗಳಲ್ಲಿನ ಈ ರುಷುವತ್ತು – ಪ್ರಲೋಭನೆಗಳು 'ಗ್ರಾಮ ಪಂಚಾಯಿತಿ'ಗಳ ಮೂಲ ಆಶಯಗಳಿಗೆ ವಿರುದ್ಧವಾಗಿವೆ. ಇಂಥ ವಿರೋಧಾಭಾಸಗಳ ನಡುವೆಯೂ 'ಗ್ರಾಮ ಪಂಚಾಯಿತಿ' ಪರಿಕಲ್ಪನೆ ತನ್ನ ಅನನ್ಯತೆಯಿಂದಾಗಿ ವಿಶ್ವದ ಗಮನಸೆಳೆದಿದೆ.

ರಾಜ್ಯದ 5835 ಗ್ರಾಮ ಪಂಚಾಯಿತಿಗಳ 94 ಸಾವಿರ ಸ್ಥಾನಗಳಿಗೆ ನಡೆದ ಚುನಾವಣೆ ಪ್ರಜಾಪ್ರಭುತ್ವ ವ್ಯವಸ್ಥೆಯ ಬಹುದೊಡ್ಡ ಅಗ್ನಿಪರೀಕ್ಷೆ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದಿರುವ ಪ್ರತಿನಿಧಿಗಳು ಈಗ ಚುನಾವಣೆಗಿಂತಲೂ ದೊಡ್ಡ ಸವಾಲನ್ನು ಎದುರಿಸಬೇಕಾಗಿದೆ. ಅದು, ಜಾತಿ ಹಾಗೂ ಪಕ್ಷ ರಾಜಕಾರಣವನ್ನು ಬದಿಗಿಡುವ ಸವಾಲು ಹಾಗೂ ಅಭಿವೃದ್ಧಿಯೊಂದನ್ನೇ ನೆಚ್ಚಿಕೊಂಡು ದುಡಿಯುವ ಸವಾಲು. ಚುನಾವಣೆಯಲ್ಲಿನ ಸ್ಪರ್ಧೆ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ, ಸವಾಲಿನ ಸಂಗತಿಯನ್ನಾಗಿ ಭಾವಿಸುವವರಿದ್ದಾರೆ. ಆದರೆ, ಗೆಲುವಿನ ನಂತರ ಈ ಎಲ್ಲ ಒತ್ತಡ – ಪ್ರಭಾವಳಿಗಳು ಕರಗಿ ಜವಾಬ್ದಾರಿಯಷ್ಟೇ ಉಳಿಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ ಅತ್ಯಂತ ಮಹತ್ವದ್ದು. ಆ ಕಾರಣದಿಂದಲೇ ಪಂಚಾಯಿತಿ ಪ್ರತಿನಿಧಿಗಳು ಹೆಚ್ಚು ಜವಾಬ್ದಾರಿಯಿಂದ ವರ್ತಿಸುವುದು ಅಗತ್ಯ.


ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸದರು ಅಥವಾ ಶಾಸಕರಿಗಿಂತಲೂ ಹೆಚ್ಚಿನ ಹೊಣೆಗಾರಿಕೆ ಪಂಚಾಯಿತಿ ಸದಸ್ಯರಿಗಿದೆ. ರಾಜ್ಯ, ಕೇಂದ್ರ ಸರ್ಕಾರಗಳನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು ದಂತಗೋಪುರಗಳಲ್ಲಿ ಸೇರಿಕೊಂಡು ಜನರಿಂದ ದೂರವೇ ಉಳಿಯುತ್ತಿರುವ ವಾಸ್ತವ ಇಂದಿನದು. ಆದರೆ, ಜನರ ನಡುವೆಯೇ ವಾಸಿಸುವ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಸಾಮಾಜಿಕ ಉತ್ತರದಾಯಿತ್ವದಿಂದ ಪಾರಾಗುವುದು ಕಷ್ಟ. ಗ್ರಾಮದ ಅಭಿವೃದ್ಧಿ ಹಾಗೂ ವೈಫಲ್ಯಕ್ಕೆ ಅವರು ನೇರ ಹೊಣೆಗಾರರು. ಆದರೆ, ಅವರಿಂದ ಪ್ರಾಮಾಣಿಕವಾಗಿ ಕೆಲಸ ತೆಗೆದುಕೊಳ್ಳುವ ಜವಾಬ್ದಾರಿ ಅಂತಿಮವಾಗಿ ಜನರದೇ ಆಗಿದೆ.

ಗ್ರಾಮ ಪಂಚಾಯಿತಿಗಳ ಯಶಸ್ಸಿನಲ್ಲಿ ಗ್ರಾಮಸಭೆಗಳ ಪಾಲು ದೊಡ್ಡದು. ಬಹುತೇಕ ಸಂದರ್ಭಗಳಲ್ಲಿ ಗ್ರಾಮಸಭೆಗಳು ಕಾಟಾಚಾರಕ್ಕೆ ನಡೆಯುತ್ತವೆ. ಸರ್ಕಾರದ ಒತ್ತಡಕ್ಕೆ ಎನ್ನುವಂತೆ ಸಭೆಗಳು ನಡೆಯುವುದೂ ಇದೆ. ಗ್ರಾಮ ಮಟ್ಟದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಗೈರುಹಾಜರಿಯಲ್ಲಿ ಕೆಲವು ಸಭೆಗಳು ಅರ್ಥ ಕಳೆದುಕೊಂಡರೆ, ಮತ್ತೆ ಕೆಲವು ಸಭೆಗಳು ದೂರು ಪ್ರತಿ ದೂರುಗಳಲ್ಲಿ ಮುಗಿದುಹೋಗುತ್ತವೆ. ಹೀಗಾಗಲು ಬಿಡದೆ, ಗ್ರಾಮಸಭೆಗಳನ್ನು ಊರಿನ ಹಿತಕ್ಕೆ ಸಂಬಂಧಿಸಿದ ಚಟುವಟಿಕೆಗಳ ಅರ್ಥಪೂರ್ಣ ಚರ್ಚೆಗಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಪಂಚಾಯಿತಿ ಸದಸ್ಯರು ಕಾರ್ಯ ನಿರ್ವಹಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾವಂತ ಯುವಜನ, ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗಳಲ್ಲಿ ಪಾಲ್ಗೊಳ್ಳುವ ವಾತಾವರಣ ಕಲ್ಪಿಸಬೇಕು. ಸರ್ಕಾರದ ಯೋಜನೆಗಳು ಅರ್ಹರಿಗೆ ಪರಿಣಾಮಕಾರಿಯಾಗಿ ತಲುಪುವ ನಿಟ್ಟಿನಲ್ಲಿ ಗ್ರಾಮಸಭೆಗಳು ಸೇತುವೆಯ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಯೋಗಶಾಲೆಗಳ ರೂಪದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಗುರ್ತಿಸಲಾಗಿದೆ. ಇವುಗಳ ಹಿನ್ನೆಲೆಯಲ್ಲಿ ಧಾರ್ಮಿಕ ನಿರಪೇಕ್ಷತೆ, ಜಾತ್ಯತೀತ ಹಾಗೂ ಪಕ್ಷರಹಿತ ರಾಜಕಾರಣದ ಉದಾತ್ತ ಮೌಲ್ಯಗಳಿವೆ. ನೇರವಾಗಿ ಜನರ ಕೈಗೇ ಅಧಿಕಾರವನ್ನು ಕೊಡುವ ಹಾಗೂ ಅಧಿಕಾರ ವಿಕೇಂದ್ರೀಕರಣದ ಈ ಪರಿಕಲ್ಪನೆ, ಗಾಂಧೀಜಿ ಪ್ರತಿಪಾದಿಸಿದ ಸ್ವರಾಜ್ಯದ ಮಾದರಿಗೆ ಸಮೀಪವಾದುದು. ಇಂಥ ವ್ಯವಸ್ಥೆಯನ್ನು ಬಲಪಡಿಸುವ ನೈತಿಕ ಹೊಣೆ ಪ್ರಸಕ್ತ ಚುನಾವಣೆಯಲ್ಲಿ ಆರಿಸಿಬಂದಿರುವ ಎಲ್ಲ ಪ್ರತಿನಿಧಿಗಳ ಮೇಲಿದೆ. ಚುನಾವಣೆಗಳಲ್ಲಿನ ಗೆಲುವಿನಿಂದ ದೊರೆಯುವುದು ಜವಾಬ್ದಾರಿಯೇ ಹೊರತು ಅಧಿಕಾರ ಸ್ಥಾನವಲ್ಲ ಎನ್ನುವ ಸತ್ಯವನ್ನು ಜನ ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕಿದೆ. ಸರ್ಕಾರ ಮತ್ತು ಗ್ರಾಮಗಳ ನಡುವೆ ಸೇತುವೆಯಾಗಿ– ನೀರು, ರಸ್ತೆ, ಆಸ್ಪತ್ರೆ, ಶಾಲೆಗಳಂಥ ಮೂಲಭೂತ ಸೌಕರ್ಯಗಳನ್ನು ತಮ್ಮ ಜನರಿಗೆ ಒದಗಿಸುವ ಹಾಗೂ ಊರಿನ ನೈರ್ಮಲ್ಯವನ್ನು ಕಾಪಾಡುವ ಸದವಕಾಶ ಅವರದು. ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದಾಗಷ್ಟೇ ಪಂಚಾಯಿತಿ ಪರಿಕಲ್ಪನೆ ಅರ್ಥವತ್ತಾದೀತು.

■ ರಘುನಾಥ ಚ.ಹ.

ಜನರ ನಡುವೆಯೇ ವಾಸಿಸುವ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಸಾಮಾಜಿಕ ಉತ್ತರದಾಯಿತ್ವದಿಂದ ಪಾರಾಗುವುದು ಕಷ್ಟ. ಗ್ರಾಮದ ಅಭಿವೃದ್ಧಿ ಹಾಗೂ ವೈಫಲ್ಯಕ್ಕೆ ಅವರು ನೇರ ಹೊಣೆಗಾರರು. ಆದರೆ, ಅವರಿಂದ ಪ್ರಾಮಾಣಿಕವಾಗಿ ಕೆಲಸ ತೆಗೆದುಕೊಳ್ಳುವ ಜವಾಬ್ದಾರಿ ಅಂತಿಮವಾಗಿ ಜನರದೇ ಆಗಿದೆ.



ಈಶ್ವರ್